## ಉಳಿಯುವುದು ನಟನೆಯಷ್ಟೇ!

‘ಬಾಲಿವುಡ್‌ನ ಮಹಾ ಸಾಗರದಲ್ಲಿ ದಿನಕ್ಕೊಬ್ಬ ನಟ/ನಟಿ ಹುಟ್ಟಿಕೊಳ್ಳುತ್ತಾರೆ. ನೈಜ ಕಲಾವಿದ ಎನಿಸಿಕೊಂಡವರು ಮಾತ್ರ ಅಸ್ತಿತ್ವ ಉಳಿಸಿಕೊಳ್ಳಬಲ್ಲರು. ಕಲಾವಿದನಾಗಿ ನೀವು ಜನರ ಮನಸಿನಲ್ಲಿ ಶಾಶ್ವತ ಸ್ಥಾನ ಪಡೆದುಕೊಳ್ಳುವುದು ನಿಮ್ಮ ನಟನೆಯಿಂದ ಮಾತ್ರ. ಆ ಕಾರಣಕ್ಕಾಗಿ ನಿಮ್ಮನ್ನು ಅವರು ನೆನಪಿಸಿಕೊಳ್ಳುತ್ತಾರೆ. ಎಷ್ಟೋ ಬಾರಿ ಸಿನಿಮಾ ಬಾಕ್ಸಾಫೀಸ್‌ನಲ್ಲಿ ಹೆಚ್ಚು ಗಳಿಸುವುದೇ ಇಲ್ಲ. ಅದು ಸಿನಿಮಾದ ಹಣೆಬರಹ. ಕಲಾವಿದರಾದ ನಮ್ಮಿಂದ ಅದನ್ನು ನಿಯಂತ್ರಿಸಲಾಗದು. ಆದರೆ ಒಳ್ಳೆಯ ಶ್ರಮಕ್ಕೆ ಪ್ರೇಕ್ಷಕರ ಮೆಚ್ಚುಗೆಯಂತೂ ಇರುತ್ತದೆ’ ಎನ್ನುವುದು ಶ್ರದ್ಧಾ ಕಪೂರ್ ಉವಾಚ.

ಆದಿತ್ಯ ರಾಯ್ ಕಪೂರ್ ಜತೆಗೆ ಶ್ರದ್ಧಾ ನಟಿಸಿರುವ ‘ಓಕೆ ಜಾನು’ ಚಿತ್ರಕ್ಕೆ ಉತ್ತಮ ಪ್ರತಿಕ್ರಿಯೆ ದೊರಕಿದೆ. ಆಶಿಕಿ–2’ನಲ್ಲಿ ಭರ್ಜರಿ ಯಶಸ್ಸನ್ನು ಸವಿದಿದ್ದ ಈ ಜೋಡಿ, ಬಳಿಕ ‘ಲವ್ ದ ಎಂಡ್’ ಮತ್ತು ‘ಗುಜಾರಿಶ್’ ಚಿತ್ರಗಳಲ್ಲಿ ಸೋಲಿನ ಕಹಿ ಕಂಡಿದ್ದರು. ಹಳೆಯ ಸೋಲಿನ ಕುರಿತು ಪ್ರಶ್ನೆ ಎದುರಿಟ್ಟಾಗ ಶ್ರದ್ಧಾ, ಸಿನಿಮಾ ಸೋತಿದ್ದರೂ ತಾನು ನೆನಪಿನಲ್ಲಿ ಉಳಿಯುತ್ತೇನೆ ಎಂಬುದನ್ನು ಸೂಚ್ಯವಾಗಿ ಹೇಳಿದ್ದು ಹೀಗೆ. ಅದೃಷ್ಟ ಎನ್ನುವುದು ಪ್ರತಿ ಶುಕ್ರವಾರ ಬದಲಾಗುತ್ತದೆ. ವೈಫಲ್ಯ ಮತ್ತು ಗೆಲುವು ಎರಡರ ಮುಖವನ್ನೂ ನೋಡಿದ್ದೇನೆ. ಅವುಗಳನ್ನು ನಾವು ನಿಯಂತ್ರಿಸಲು ಸಾಧ್ಯವಿಲ್ಲ. ಒಳ್ಳೆಯ ಕೆಲಸವನ್ನು ಜನ ಯಾವತ್ತಿಗೂ ಹೊಗಳುತ್ತಾರೆ ಎಂದಿದ್ದಾಳೆ ಶ್ರದ್ಧಾ. ‘ಆಶಿಕಿ–2’ ಗೆಲುವಿನ ಬೆನ್ನಲ್ಲೇ ಅಂತಹ ಅನೇಕ ಸಿನಿಮಾಗಳ ಆಹ್ವಾನಗಳು ಬಂದವು. ಆದರೆ, ಯಾವ ಕಥೆಯೂ ನಮ್ಮಿಬ್ಬರಿಗೂ ಸೂಕ್ತ ಎನಿಸಲಿಲ್ಲ ಎನ್ನುವ ಶ್ರದ್ಧಾ,ಗೆದ್ದ ಕುದುರೆಯ ಬಾಲ ಹಿಡಿಯುವ ಬಿಟೌನ್ ಮಂದಿಯ ವ್ಯವಹಾರವನ್ನು ಮೆಚ್ಚಿಕೊಳ್ಳುವುದಿಲ್ಲ.





## ಸಂದೇಶದ ಬೆನ್ನತ್ತಿ!

ಸಿನಿಮಾ ಇರುವುದು ಮನರಂಜನೆಗಾಗಿ ಮಾತ್ರವಲ್ಲ. ಅದು ಒಳ್ಳೆಯ ಸಾಮಾಜಿಕ ಸಂದೇಶವನ್ನೂ ರವಾನಿಸಬಲ್ಲವು ಎನ್ನುವುದು ಒಂದು ಕಾಲದ ಸಿನಿಮಾಗಳ ಆಶಯ ಮತ್ತು ಉದ್ದೇಶವೂ ಆಗಿತ್ತು, ಈಗ ಸಾಮಾಜಿಕ ಅಂಶಗಳು ಅಪರೂಪಕ್ಕೊಮ್ಮೆ ಕಾಣಿಸಿಕೊಳ್ಳುತ್ತಿರುತ್ತವೆ. ಇತ್ತೀಚಿನ ದಿನಗಳಲ್ಲಿ ಬಾಲಿವುಡ್‌ನಲ್ಲಿಯೂ ಸಂದೇಶ ಆಧಾರಿತ ಸಿನಿಮಾಗಳು ಬರುತ್ತಿರುವುದು ಖುಷಿ ಕೊಡುತ್ತಿವೆ ಎಂದಿದ್ದಾಳೆ ಭೂಮಿ ಪೆಡ್ನೇಕರ್. ‘ದಮ್ ಲಗಾ ಕೆ ಐಸಾ’, ‘ಟಾಯ್ಲೆಟ್ ಏಕ್ ಪ್ರೇಮ್ ಕಥಾ’ದಂತಹ ಸಾಮಾಜಿಕ ಸಿನಿಮಾಗಳಲ್ಲಿ ನಟಿಸಿರುವ ಭೂಮಿಗೆ, ಜನರೊಂದಿಗೆ ಸಂವಹಿಸಲು ಸಿನಿಮಾ ಅತ್ಯಂತ ಸುಲಭ ಮಾಧ್ಯಮ ಎನಿಸಿದೆ. ‘ನಮ್ಮ ಸುತ್ತಲಿನ ಸಮಸ್ಯೆಗಳು ಮತ್ತು ಪರಿಸ್ಥಿತಿಯ ಕುರಿತು ಇಂದಿನ ಜನರು, ಪ್ರೇಕ್ಷಕರು ಮತ್ತು ಚಿತ್ರ ನಿರ್ದೇಶಕರು ಹೆಚ್ಚು ತಿಳಿದುಕೊಂಡಿದ್ದಾರೆ. ಈ ಮುಂಚೆ ನಾವು ಇಂಥವುಗಳನ್ನು ನಿರ್ಲಕ್ಷಿಸುತ್ತಿದ್ದೆವು. ಆದರೆ, ನಾವು ಕೆಲವು ಅಂಶಗಳನ್ನು ನಿರ್ಲಕ್ಷಿಸಲು ಸಾಧ್ಯವೇ ಇಲ್ಲದ ತುದಿಗೆ ತಲುಪಿದ್ದೇವೆ. ಇದು ಒಂದು ರೀತಿ ರೋಚಕ ಸಂಗತಿ’ ಎನ್ನುವುದು ಆಕೆಯ ಅಭಿಪ್ರಾಯ. ಜನರೊಂದಿಗೆ ಸಂವಹನ ನಡೆಸಲು ಸಿನಿಮಾ ಅತಿ ದೊಡ್ಡ ಮತ್ತು ಸರಳ ಮಾಧ್ಯಮ. ಅದನ್ನು ಒಳಿತಿಗಾಗಿ ಬಳಸಿಕೊಂಡರೆ, ಒಳ್ಳೆಯದನ್ನೇ ನೀಡುವುದು ಏಕೆ ಸಾಧ್ಯವಿಲ್ಲ ಎಂಬ ಪ್ರಶ್ನೆ ಆಕೆಯದು.

ಕಮರ್ಷಿಯಲ್ ಸಿನಿಮಾಗಳ ನಡುವೆ ಭೂಮಿ ತುಸು ವಿಶಿಷ್ಟ ಎನಿಸುವ ಚಿತ್ರಗಳಲ್ಲಿ ನಟಿಸುತ್ತಿದ್ದಾಳೆ. ತನಗೆ ದೊರಕುತ್ತಿರುವ ಪಾತ್ರಗಳ ಬಗ್ಗೆ ಆಕೆಗೆ ಹೆಮ್ಮೆಯಿದೆ. ಭಾರತದ ಯುವತಿಯರ ಕುರಿತಾದ ನೈಜ ಕಥೆಗಳನ್ನು ಆಧರಿಸಿದ ಸಿನಿಮಾಗಳು ಆಕೆಯನ್ನು ಹುಡುಕಿಕೊಂಡು ಬರುತ್ತಿವೆ. ವಸ್ತುಗಳಿಗಿಂತಲೂ ಮುಖ್ಯವಾಗಿ ಆಕೆ ತನ್ನ ಪಾತ್ರಗಳಿಗೆ ಆದ್ಯತೆ ನೀಡುತ್ತಾಳಂತೆ. ಪಾತ್ರದ ಸ್ವರೂಪದಲ್ಲಿಯೇ ಕಥೆಯ ಗುಣ ಮತ್ತು ಸಾಮರ್ಥ್ಯ ತಿಳಿಯುತ್ತವೆ ಎನ್ನುವ ಭೂಮಿ, ಅಂತಹ ಪಾತ್ರಗಳು ತನಗೆ ಸಿಗುತ್ತಿರುವುದಕ್ಕೆ ತನ್ನನ್ನು ಅದೃಷ್ಟಶಾಲಿ ಎಂದು ಕರೆದುಕೊಂಡಿದ್ದಾಳೆ.